# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.

**C.C No.** 1253/2022

| | | |
|---|---|---|
| ಸಾಕ್ಷಿದಾರರ ಹೆಸರು: | ಗೌರಮ್ಮ | ಪ್ರಮಾಣ ಮಾಡಿದ ದಿನಾಂಕ 26.11.2025. |
| ಗಂಡನ ಹೆಸರು: | ಕಿಕ್ಕಿರಿಶೆಟ್ಟಿ | |
| ವಯಸ್ಸು: | 41 ವರ್ಷ | |
| ವೃತ್ತಿ: | ಕೂಲಿ ಕೆಲಸ | CW-1 |
| ವಾಸಸ್ಥಳ: | ಕುಂತೂರುಮೋಳೆ | PW-1 |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು, ಅವರು ನನ್ನ ಸಂಬಂಧಿಕರು, ಈಗ ಸುಮಾರು 3 ವರ್ಷಗಳ ಹಿಂದೆ ಸಣ್ಣಪುಟ್ಟ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ಕೇವಲ ಬಾಯಿ ಮಾತಿನ ಜಗಳವಾಗಿರುತ್ತದೆ. ಕೇವಲ ಬಾಯಿ ಮಾತಿನ ಜಗಳವನ್ನು ಹೊರತುಪಡಿಸಿದರೆ ಇನ್ನೇನು ಆಗಿರುವುದಿಲ್ಲ. ಆರೋಪಿತರು ನಮ್ಮ ಮೇಲೆ ಯಾವುದೇ ಅಪರಾಧಿಕ ಕೃತ್ಯಗಳನ್ನು ಮಾಡಿರುವುದಿಲ್ಲ.

ನಾನು ಈ ವಿಚಾರವನ್ನು ಪೊಲೀಸರಿಗೆ ತಿಳಿಸಲು ಹೋದಾಗ ಅವರ ಕೋರಿಕೆಯ ಮೇರೆಗೆ 2 ದಾಖಲಾತಿಗಳಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ಗುರುತಿಸಿರುತ್ತಾರೆ. ಆ ದಾಖಲಾತಿಗಳು ಪ್ರಥಮ ಮಾಹಿತಿ ಹೇಳಿಕೆ ಹಾಗೂ ಕೊಳ್ಳೇಗಾಲ ನ್ಯಾಯಾಧೀಶರ ಮುಂದೆ ನೀಡಿರುವ ದಂಡ ಪ್ರಕ್ರಿಯ ಸಂಹಿತೆಯ ಕಲಂ 164 ರ ಅಡಿಯಲ್ಲಿ ನೀಡಿರುವ ಹೇಳಿಕೆ ಆಗಿರುತ್ತದೆ. ಸಾಕ್ಷಿಯು ಸದರಿ ದಾಖಲಾತಿಗಳಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ ಆದ್ದರಿಂದ ಪ್ರಥಮ ಹೇಳಿಕೆಯನ್ನು ನಿಪಿ-1, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 1(ಎ), ಹೇಳಿಕೆಯನ್ನು ನಿಪಿ-2, ಹಾಗೂ ಅದರಲ್ಲಿರುವ ಸಾಕ್ಷಿಯ 2 ಸಹಿಗಳನ್ನು

ನಿಪಿ- 2(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿರುವುದಿಲ್ಲ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿನಾಂಕ 15.05.2022 ರಂದು ಸಂಜೆ 4.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-2 ರಿಂದ 4 ರವರು ನಮ್ಮ ಮನೆಯ ಒಳಗೆ ಇದ್ದಾಗ ಈ ಪ್ರಕರಣದ ಆರೋಪಿ 1 ರವರು ತೀಟೆ ಜಗಳ ತೆಗೆದು ಚಾಸಾ- 4 ರವರ ಮನೆಯ ಮುಂಭಾಗ ರಸ್ತೆಯಲ್ಲಿ ನಿಂತು ನನ್ನನ್ನು ಮತ್ತು ಚಾಸಾ-2 ರವರನ್ನು ಬಡ್ಡಿ ಸೂಳೇ ಏಕೆ ನನ್ನ ಮನೆಯ ಕಡೆಗೆ ನೀರು ಬಿಟ್ಟಿದ್ದೀಯಾ ಎಂದು ಬೈದಿರುತ್ತಾರೆ ಎಂದರೆ ಸರಿಯಲ್ಲ. ನಾನು ಚಾಸಾ- 2 ರವರು ನಮ್ಮನ್ನು ಏಕೆ ಬೈಯ್ಯುತ್ತೀಯಾ ಎಂದು ಕೇಳಿದಾಗ ಹಾಗೂ ನೀರು ಆಕಸ್ಮಿಕವಾಗಿ ನಿಮ್ಮ ಮನೆಯ ರಸ್ತೆಯಲ್ಲಿ ಹರಿದಿರುತ್ತೆ ಎಂದು ಹೇಳುವಾಗ ಆರೋಪಿ 1 ರವರು ನನ್ನನ್ನು ಬಡ್ಡಿ ಏನು ಮಾತನಾಡುತ್ತೀರಿ ಎಂದು ಬೈದು ತಲೆ ಜುಟ್ಟು ಹಿಡಿದು ಎಳೆದಾಡಿ ರಸ್ತೆಗೆ ತಳ್ಳಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿ 2 ರವರು ನನ್ನ ಮೈಕೈಗೆ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 1 ರಿಂದ 3 ರವರು ನನ್ನನ್ನು ಕಾಲುಗಳಿಂದ ತುಳಿದು ಹೊಟ್ಟೆ ಮತ್ತು ಬೆನ್ನಿಗೆ ಒದ್ದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ- 2 ರವರು ಜಗಳವನ್ನು ತಡೆಯಲು ಬಂದಾಗ ಆರೋಪಿ 3 ರವರು ಚಾಸಾ- 2 ರವರು ಧರಿಸಿದ್ದ ಬಟ್ಟೆಯನ್ನು ಮತ್ತು ವೇಲನ್ನು ಹಿಡಿದು ಎಳೆದಾಡಿ ಸಾರ್ವಜನಿಕ ರಸ್ತೆಯಲ್ಲಿ ಅವಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 04.07.2022 ರಂದು ನಾನು ನಿಪಿ- 2 ರಂತೆ ಕೊಳ್ಳೇಗಾಲ ನ್ಯಾಯಾಧೀಶರ ಮುಂದೆ ಈ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಪೊಲೀಸರಿಗೆ ಈ ವಿಚಾರವಾಗಿ ಈಗ ಓದಿ ಹೇಳಿದ ಹಾಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿತರೊಂದಿಗೆ ಈಗ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ನಿಜ. ರಾಜಿ ಮಾಡಿಕೊಂಡ ಕಾರಣ ಆರೋಪಿತರನ್ನು ಶಿಕ್ಷೆಯಿಂದ ಪಾರು ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಪಾಟೀ ಸವಾಲು: ಆರೋಪಿ ಪರ ವಕೀಲರರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.